# ,ಮ, ಅಕ್ಷರದ ವಚನದ ಅರ್ಥ

**1) ಮನ ಮನ ತಾರ್ಕಣೆಯಗೊಂಡು ಅನುಭವಿಸಲು
ನೆನಹೆ ಘನವಹುದಲ್ಲದೆ ಅದು ಹವಣದಲ್ಲಿ ನಿಲ್ಲುವುದೆ?
ಎಲೆ ಅವ್ವಾ ,ನೀನು ಮರುಳವ್ವೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಗೊಲಿದು
ಸಲೆ ಮಾರುಹೋದೆನು. ನಿನ್ನ ತಾಯಿತನವನೊಲ್ಲೆ ಹೋಗಾ.**

## ಪದಗಳ ಅರ್ಥ

ತಾರ್ಕಣೆ- ಕೂಡಿ, ಒಂದಾಗಿ, ಚರ್ಚಿಸಿ.
ಹವಣು- ಪ್ರಮಾಣ,
ಮರುಳು -ಹುಚ್ಚು
ಸಲೆ-ಅತ್ಯಂತ, ಕಡು ಹೆಚ್ಚಾಗಿ, ಮಾರುಹೋದೆ-ಮಾರಿಕೊಂಡೆ,ಮನಸ್ಸುಕೊಟ್ಟೆ
ತಾಯಿತನ-ಹೆತ್ತವ್ವ ಎಂಬ ಭಾವ.

## ವಚನದ ಅರ್ಥ

ಮನ ಮನ ತಾರ್ಕಣೆಯ ಕಂಡು ಅನುಭವಿಸಲು ಮನಸ್ಸು ತರ್ಕಿಸಿ ಅದನ್ನು ಪಡೆಯ ಬೇಕೆಂದು ನಿರ್ಧರಿಸಿದ ಮೇಲೆ, ನೆನಹೆ ಘನವಲ್ಲದೆ ಅದು ಹವಣದಲ್ಲಿ ನಿಲ್ಲುವುದೆ? ನೆನಹೇ ಬ್ರಹ್ಮ. ಅದು ಪ್ರಮಾಣದಲ್ಲಿ ನಿಲ್ಲುವುದೆ? ಅದನ್ನು ಪಡೆದೆತೀರುವೆನೆಂಬ ಇಚ್ಛಾ ಪೂರ್ಣ ಮಾಡಿಕೊಳ್ಳುವುದು. ಎಲೆ ಅವ್ವಾ ನೀನು ಮರುಳವ್ವ ! ನೀನು ನನ್ನನ್ನು ಹುಚ್ಚಿ ಎನ್ನುತ್ತಿರುವೆ. ನಾನು ಹುಚ್ಚಿಯಲ್ಲ. ನೀನು ಹುಚ್ಚಿ. ನನ್ನ ಮಗಳು ಎನ್ನುವ ಮಮಕಾರದಲ್ಲಿ ಬಂದಿರುವ ನೀನು ಹುಚ್ಚಿ, ನಾನು ಪರಮಾತ್ಮನ ಹಂಬಲದಲ್ಲಿರುವ ಹುಚ್ಚಿ ಎನ್ನದೇವ ಚೆನ್ನಮಲ್ಲಿಕಾರ್ಜುನಂಗೆ ಒಲಿದು ಸಲೆ ಮಾರುಹೋದೆನು. ನನ್ನ ದೇವರು, ಗಂಡ ಚೆನ್ನಮಲ್ಲಿಕಾರ್ಜುನದೇವರು.ನಾನು ಅವನ ವಿಚಾರವಾಗಿ ಚೆನ್ನಾಗಿ ತಿಳಿದೆ ನನ್ನನ್ನು ಮಾರಿಕೊಂಡಿದ್ದೇನೆ. ನನ್ನನ್ನು ಅವನಿಗೆ ಕೊಟ್ಟುಕೊಂಡಿದ್ದೇನೆ.ನಾನು ಅವನನ್ನು ಪ್ರೀತಿ ಮಾಡಿದ್ದೇನೆ. ನಿನ್ನತಾಯಿತನವನೊಲ್ಲೆ ಹೋಗಾ. ನನಗೆ ನಿನ್ನ ತಾಯಿತನ ಬೇಡ ಹೋಗು. ಸ್ಪಷ್ಟಮಾತುಗಳಲ್ಲಿ ನಿರಾಕರಿಸಿದ್ದಾರೆ. ಅವರಿಗೆ ಖಚಿತವಾಗಿ ನಿರ್ಧಾರಗಳಿವೆ. ಪರಮಾತ್ಮನನ್ನೇ ಪತಿಯನ್ನಾಗಿ ಪಡೆಯ ಬೇಕೆಂಬ ಹಂಬಲದಲ್ಲಿ ಮುಳುಗಿದ್ದಾರೆ.ರಾಜ ಕೌಶಿಕ ,ತಂದೆ,ತಾಯಿಗಳನ್ನು ಕೊಲ್ಲುವುದಾಗಿ ಬೆದರಿಕೆಯೊಡ್ಡಿದ. ಇರುವ ಮಿತಿಯಲ್ಲಿ ಮೂರು ಕರಾರು ಹಾಕಿದರು. ಆ ತಪ್ಪುಗಳು ಸಂಭವಿಸಿ, ಅಕ್ಕಮಹಾದೇವಿಯವರು ಅರಮನೆಯಿಂದ ಹೊರ ಬಿದ್ದರು. ಉಡುತಡಿಯಿಂದ ಅಕ್ಕಮಹಾದೇವಿಯವರು ಕೇಶಾಂಬರೆಯಾಗಿ ನಿರ್ಗಮಿಸುತ್ತಿದಾರೆ. ಮಹಾತ್ಮರ ದಾರಿಯಲ್ಲಿ ಹೋಗಬೇಕೆಂದು ನಿರ್ಧರಿಸಿದರು. ಲೌಕಿಕ ಅವರಿಗೆ ರುಚಿಸಲಿಲ್ಲ. ಪರಮಾತ್ಮನನ್ನು ಕೇವಲ ಪೂಜಿಸಿ,ಭಾವಿಸಿ ಕಲ್ಪಿಸಿ ಧ್ಯಾನಿಸಿ ಸುಮ್ಮನಾಗುವ ಚೇತನ ಅವರದಲ್ಲ.ಅನುಭಾವ ಕೇವಲ ತರ್ಕ. ಕರ್ಮ, ಪೂಜೆ ಕ್ರಿಯಾ ದಿಗಳಲ್ಲಿ

ವಿರಮಿಸುವುದಿಲ್ಲ. ಅನುಭಾವವೇ ತಾನಾಗುವುದು. ಪರಮಾತ್ಮನೇ ತಾನಾಗುವುದು. ಮನಸ್ಸು ಎತ್ತರದಲ್ಲಿ ಒಂದು ನಿರ್ಣಯಕ್ಕೆ ಬಂದಿದೆ. ನೆನಪು ಹಿರಿದಾಗಿದೆ. ಅದು ಕೇವಲ ಪ್ರಮಾಣದಲ್ಲಿ ನಿಲ್ಲುವಂಥದಲ್ಲ. ಅವ್ವಾ ನೀನು ಮಗಳು ಎನ್ನುವ ಮೋಹದಲ್ಲಿ ಬಂದಿರುವೆ. ನಾನು ಹುಚ್ಚಿಯಲ್ಲ. ನೀನು ಹುಚ್ಚಿ ನೀನು ನನ್ನ ಮಗಳು ಎನ್ನುವ ಮಮಕಾರದಲ್ಲಿ ಬಂದಿರುವೆ. ನಿನ್ನ ತಾಯಿತನ ನನ್ನ ಆಧ್ಯಾತ್ಮ ಜೀವನಕ್ಕೆ ಅಡ್ಡಿ.ನೀನು ಹೋಗು. ಅಕ್ಕನವರು ನಿಷ್ಠುರವಾಗಿ ತಾಯಿಯವರಿಗೆ ಹೇಳಿದ್ದಾರೆ. ನನ್ನ ದೇವರು ಚೆನ್ನಮಲ್ಲಿಕಾರ್ಜುನದೇವರು . ಅವನಿಗೆ ನಾನು ಮಾರು ಹೋಗಿದ್ದೇನೆ ..ಲೌಕಿಕರ ವಿಚಾರಗಳು ನಿಜಕ್ಕೂ ಆಶ್ಚರ್ಯ.ಈ ತಂದೆತಾಯಿಗಳೇ ಮಕ್ಕಳಿಗೆ ಭಕ್ತಿ ಮಾಡುವು ದನ್ನು ಕಲಿಸುತ್ತಾರೆ. ದೇವರು ದೊಡ್ಡವನು.ಭಕ್ತರ ಇಚ್ಛೆ ನೆರವೇರಿಸುತ್ತಾನೆ ಎಂದೆಲ್ಲ ಹೇಳುತ್ತಾರೆ. ಅವನೇ ನಮ್ಮನ್ನು ಜಗತ್ತನ್ನು ಸೃಷ್ಟಿಸಿದವನು ಎಂದೆಲ್ಲ ಹೇಳುತ್ತಾರೆ ಆ ಪರಮಾತ್ಮನನ್ನೇ ಪಡೆದುಕೊಳ್ಳುತ್ತೇನೆಂದು ಮಕ್ಕಳು ಹೊರಟರೆ ಇದೇ ತಂದೆ ತಾಯಿಗಳೇ ಅಡ್ಡ ಬರುತ್ತಾರೆ. ಇದು ಆಶ್ಚರ್ಯ.

2) ಮರಹು ಬಂದಿಹುದೆಂದು ಗುರು ಕುರುಹನೆ ಕೊಟ್ಟ.
ಅರಿವಿಂಗೆ ಪ್ರಾಣಲಿಂಗ ಬೇರೆ ಕಾಣಿರಣ್ಣ..
ನಿರ್ಣಯವಿಲ್ಲದ ಭಕ್ತಿಗೆ ಬರಿದೆ ಬಳಲದೇತಕೆ?
ಚೆನ್ನಮಲ್ಲಿಕಾರ್ಜುನಯ್ಯನನರಿದು ಪೂಜಿಸಿದರೆ
ಮರಳಿ ಭವಕ್ಕೆ ಬಹೆನೆ?

## ಪದಗಳ ಅರ್ಥ

ಮರಹು-ಅಜ್ಞಾನಾವರಿಸುವುದು
,ಕುರುಹು-ಸಂಕೇತ, ಚುಳುಕು,
ಅರಿವು-ಜ್ಞಾನ ಪ್ರಾಣಲಿಂಗ-ಇಷ್ಟಲಿಂಗ,
ನಿರ್ಣಯ-ನಿಶ್ಚಿತಜ್ಞಾನ,
ಭಕ್ತಿ-ಪೂಜೆ,
ಬಳಲು-ಸಾಕಾಗು,

## ವಚಪದ ಅರ್ಥ

ಇಲ್ಲಿ ಲಿಂಗವು ಸಾಧನೆಗೆ, ಧರ್ಮಸಂಘಟನೆಗೆ ಒಂದು ಲಾಂಛನ. ಆದರೆ ಆ ಉದ್ದೇಶವನ್ನು ಮರೆತು ಇಷ್ಟಲಿಂಗವೆ ದೇವರು, ಅದೆ ಪರಮಾತ್ಮ ಎಂದು ತಿಳಿದರೆ ಉಪಯೋಗವಿಲ್ಲ.

ಮರಹು ಬಂದಿಹುದೆಂದು ಗುರು ಕುರುಹನೆ ಕೊಟ್ಟ.ಅಜ್ಞಾನ ಬಂದೀತೆಂದು ಗುರು ಕುರುಹನೆ ಕೊಟ್ಟ ಅದೆ ಇಷ್ಟಲಿಂಗ. ಸಿಕ್ಕಿದ್ದೆಲ್ಲವನ್ನು ದೇವರು ಎಂದು ಪೂಜಿ ಸುವ ಅಜ್ಞಾನವನ್ನು ದೂರಮಾಡಿದ. ದೇವರು ಎಂದರೆ ಏನು ಎನ್ನುವ ಖಚಿತ
ಜ್ಞಾನವನ್ನು ನೀಡಿದ. ಅರಿವಿಂಗೆ ಪ್ರಾಣಲಿಂಗ ಬೇರೆ ಕಾಣಿರಣ್ಣ. ತಿಳಿದು ನೋಡಿದರೆ ಇಷ್ಟಲಿಂಗವೆ ಬೇರೆ ಅದರ ಅರ್ಥವೇಬೇರೆ. ಪ್ರಾಣಲಿಂಗವೆ ಬೇರೆ ಇದೆ . ನಿರ್ಣಯವಿಲ್ಲದ ಭಕ್ತಿಗೆ ಬರಿದೆ ಬಳಲದೇತಕೆ ?ಭಕ್ತಿ ಮಾಡುವಾಗ ಖಚಿತ ತಿಳಿವಳಿಕೆ ಬೇಕು. ಇದರಿಂದ ವ್ಯರ್ಥ ಬಳಲುವುದು ತಪ್ಪುತ್ತದೆ. ಇಷ್ಟಲಿಂಗ ಕರಸ್ಥಲದ ಕುರುಹು. ದೇಹದ ಸುಳುಹಿಗೆ ಕಾರಣವಾಗಿದೆಯೊ ಅದು ಪ್ರಾಣಲಿಂಗ ಅದು ಚೈತನ್ಯ ಚೆನ್ನಮಲ್ಲಿಕಾರ್ಜುನನನು ಅರಿದು ಪೂಜಿಸಿದರೆ ಮರಳಿ ಭವಕ್ಕೆ ಬಹೆನೆ? ದೇವರು ಏನು ಎಂದು ತಿಳಿದು ಉಪಾಸನೆ ಮಾಡಿದರೆ ನಾನು ಮರಳಿ ಮರ್ತ್ಯಕ್ಕೆ ಬರುವೆನೆ? ನಮ್ಮ ಜನನ ಮರಣಗಳಿಗೆ ಕಾಯ, ಮನದ ಆಶೆಗಳು ಕಾರಣ. ಮನಸ್ಸಿಗೆ ದೇಹದ ಬಯಕೆಗಳು ಪ್ರಚೋದನೆ. ಈ ಕಾಯ, ಮನಗಳಿಗೆ ಪ್ರಜ್ಞಾ, ಪ್ರಾಣವೆ ಆಧಾರ. ಅದೆ ನೀನು.ತೋರಿಕೆಯ ದೇಹ, ಮನ ನೀನೆಂದು ತಿಳಿದಿರುವೆ. ಪ್ರಜ್ಞಾಚೈತನ್ಯವೆನೀನು ಅದೆ ಶುದ್ಧ ಪರಮಾತ್ಮ. ಬಯಕೆಗಳ ಬಿಡುಗಡೆಯೆ ಹುಟ್ಟು ಸಾವಿನ ಬಿಡುಗಡೆ

3) ಮುಡಿ ಬಿಟ್ಟು ಮೊಗೆ ಬಾಡಿ ತನು ಕರಗಿದವಳ
ಎನ್ನನೇಕೆ ನುಡಿಸುವಿರಿ ಎಲೆ ಅಣ್ಣ ಗಳಿರಾ?
ಎನ್ನನೇಕೆ ನುಡಿಸುವಿರಿ ಎಲೆ ತಾಯಿಗಳಿರಾ?.
ಬಲುಹಳಿದು ಭವಗೆಟ್ಟು ಛಲವಳಿದು ಭಕ್ತಿಯಾಗಿ
ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ.

## ವಚನದ ಅರ್ಥ

ಮುಡಿಬಿಟ್ಟು ಮೊಗಬಾಡಿ ತನುಕರಗಿದವಳ, ಎನ್ನನೇಕೆ ನುಡಿಸುವಿರಿ ಎಲೆ ಅಣ್ಣಗಳಿರಾ .ಬಾಚದೆ ಹೆಣೆಯದೆ ತಲೆಗೂದಲು ಬಿಟ್ಟಿದ್ದೇನೆ ಮುಖಬಾಡಿದೆ. ತನುಸೊರಗಿದೆ. ನೋಡಿದರೆ ತಿಳಿಯುವುದಿಲ್ಲವೆ ? ನಾನು ಪರಮಾತ್ಮ ಚೆನ್ನಮಲ್ಲಿಕಾರ್ಜುನನ ವಿರಹದಲ್ಲಿದ್ದೇನೆ. ನನ್ನನ್ನು ಯಾಕೆ ಮಾತನಾಡಿಸುವಿರಿ ? ನನ್ನ ಪಾಡಿಗೆ ನನ್ನ ಬಿಡಿ . ಎನ್ನನೇಕೆ ನುಡಿಸುವಿರಿ ಎಲೆ ತಾಯಿಗಳಿರಾ ನಿಮಗೆ ತಿಳಿಯುವುದಿಲ್ಲವೆ ತಾಯಂದಿರೆ ನಾನು ಚೆನ್ನಮಲ್ಲಿಕಾರ್ಜುನನ ವಿರಹದಲ್ಲಿದ್ದೇನೆ. ನನ್ನನ್ನು ಮಾತನಾಡಿಸಬೇಡಿರಿ. ನನ್ನ ಪಾಡಿಗೆ ನನ್ನ ಬಿಡಿ . ಬಲುಹಳಿದು ಭವಗೆಟ್ಟು ಛಲವಳಿದು ಭಕ್ತಿಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ. ನಾನು ಈಗ ಬಲುಹನ್ನು ಕಳೆದುಕೊಂಡಿದ್ದೇನೆ" ನನ್ನಲ್ಲಿ ಈಗ ಯಾವ ಛಲಗಳೂ ಉಳಿದಿಲ್ಲ. ಭಕ್ತಿ ಯಾಗಿದ್ದೇನೆ . ಚೆನ್ನಮಲ್ಲಿಕಾರ್ಜುನನ್ನು ಕೂಡಿ ಕುಲವನ್ನು ಕಳೆದುಕೊಂಡಿದ್ದೇನೆ ಪರಮಾತ್ಮ ಚೆನ್ನಮಲ್ಲಿಕಾರ್ಜುನನ ಹಂಬಲದಲ್ಲಿ ಹೊರಜಗತ್ತಿಗೆ ಬಂದ ಅಕ್ಕಮಹಾದೇವಿಯವರನ್ನು ಲೋಕದ ಜನರು ಹಲವು ಪ್ರಶ್ನೆ ಕೇಳಿದ್ದಾರೆ. ಭಕ್ತಿಜ್ಞಾನ, ವೈರಾಗ್ಯ ಎಲ್ಲರಿಗೆ ಅರ್ಥವಾಗುವುದಿಲ್ಲ. ಇಂತಹ

ಚೆಂದದ ಮಗಳು ಕಾಡು ಪಾಲಾದಳು. ಲಗ್ನ ಮಾಡಿಕೊಂಡು ಹಾಯಾಗಿ ಇರಬಹುದಿತ್ತಲ್ಲ. ಎಂದು ಪ್ರಶ್ನೆ ಮಾಡಿದ್ದಾರೆ. ಈ ಹುಚ್ಚು ಹುಡುಗಿಗೆ ಯಾರೂ ಸರಿ ಬುದ್ದಿ ಹೇಳಲಿಲ್ಲವೆ? ದೇವರನ್ನು ಎಲ್ಲಿ ಲಗ್ನ ಮಾಡಿಕೊಳ್ಳಲು ಸಾಧ್ಯ? ಕರುಣೆ ತೋರಿಸುವಂತೆ ಬಂದು ಮಾತನಾಡುವ ಜನರಿಗೆ ಉತ್ತರ ಈವಚನ. ಮುಡಿ ಬಿಟ್ಟಿದ್ದೇನೆ. ಮುಖ ಬಾಡಿದೆ. .ನನ್ನ ತನು ಸೊರಗಿದೆ. ನನ್ನ ಗಂಡ ಚೆನ್ನಮಲ್ಲಿಕಾರ್ಜುನ ನನ್ನ ಹತ್ತಿರ ಇಲ್ಲ. ನನಗೆ ಅವನು ಬೇಕು .ಅವನ ಸುಡು ವಿರಹದಲ್ಲಿ ಬಸವಳಿದಿದ್ದೇನೆ. ನನ್ನನ್ನು ಏಕೆ ಮಾತ ನಾಡಿಸುವಿರಿ? ಅಣ್ಣಾಗಳೆ ನನಗೆ ನಿಮ್ಮ ಕರುಣೆ ಬೇಡ, ನನ್ನನ್ನು ನೀವು ಏಕೆಮಾತನಾ ಡಿಸುವಿರಿ ಎಲೆ ತಾಯಿಗಳಾ ? ನನ್ನ ಶಕ್ತಿಯೆಲ್ಲ ಉಡುಗಿದೆ. ಇಂದ್ರಿಯವಿಕಾರಗಳು ಹೋಗಿವೆ. ನನಗೆ ಈಗ ಲೌಕಿಕರಲ್ಲಿರುವಂತೆ ಯಾವ ಛಲ, ಅಭಿಮಾನಗಳೂ ಇಲ್ಲ. ಶುದ್ಧ ಭಕ್ತಳಾಗಿದ್ದೇನೆ. ದುಃಖವೆ ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ಜೀವನದಲ್ಲಿ ಅಪಾರ ಕಷ್ಟಗಳನ್ನುಂಡ ಅಕ್ಕನವರು ಎದುರಿಸುತ್ತಿರುವ ಎಡರುಗಳು ಒಂದೆ ಎರಡೆ? ಅನುಭಾವ ಜೀವನ ಏನು ಎಂದು ತಿಳಿಯದೆ ಚೆಂದ ಕಥೆಗಳಿಗೆ ಮಾರುಹೋಗಿ ಪಡಬಾರದ ಬವಣೆಗಳನ್ನೆಲ್ಲ ಅವರು ಅನುಭವಿಸಿದರು. ಪರಮಾತ್ಮನಿಗಾಗಿ ಅವರು ಹಾಕಿದ ಕಣ್ಣೀರು ಸಾಗರದಷ್ಟು, ಅನುಭವಿಸಿದ ದುಃಖಗಳಿಗೆ ಕೊನೆ ಮೊದಲಿಲ್ಲ. ಆದರೂ ಆ ಜೀವ ಈ ಭವಸಾಗರವನ್ನು ಈಜಿ ದಡಸೇರಿದರು,. ಮನೆತನದ ಶ್ರೀಮಂತರ, ಗುಣವಂತರಮನೆಯ ಹೆಣ್ಣುಮಗಳು ತುಂಬು ತಾರುಣ್ಯದಲ್ಲಿ ಲೋಕೋತ್ತರವಾದ ಚೆಲುವೆಯಾಗಿದ್ದೂ ಬೀದಿಯ ವಿಷಯವಾಗಿರುವುದು ಬಾಳಿನಲ್ಲಿ ಬಂದೊದಗಿದ ವಿಷಮ ಪ್ರಸಂಗವನ್ನು ಹೇಳುತ್ತದೆ. ಅಂತಹ ವಿಪರೀತದ ಘಟನೆ ಅವರ ಬಾಳಿನಲ್ಲಿ ನಡೆದುಹೋಗಿದೆ. ಅದಕ್ಕಾಗಿ ಅವರು ಮುಡಿಬಿಟ್ಟಿದ್ದಾರೆ. ಮೊಗ ಬಾಡಿದೆ. ತನು ಕರಗಿದೆ. ಈಗ ಅವರಲ್ಲಿ ಯಾವ ಉತ್ಸಾಹವೂ ಉಳಿದಿಲ್ಲ ಅವರು ಯಾರಿಗಾಗಿ ಆನಂದವಾಗಿರಬೇಕು. ಈಗ ತನಗಾಗಿಯೂ ಆನಂದವಾಗಿರಲಾರದ ಬದುಕು ಅವರದು. ಇದು ಜಗದ ಜನರಿಗೂ ನೋವಿನ ಘಟನೆ. ನಕ್ಕು ನಲಿಯಬೇಕಾದ ವಯಸ್ಸಿನಲ್ಲಿ ಈ ಹೆಣ್ಣುಮಗಳು ಇದೇನು ಹುಚ್ಚು ಹಚ್ಚಿ ಕೊಂಡಿತಲ್ಲ ಎಂದು ನೋಡಿದವರಿಗೂ ಸಂಕಟವೇ ಆಗಿದೆ.ಯಾವ ಹೆಣ್ಣುಮಗಳು ಆರೈಕೆ,ಪೋಷಣೆ, ರಕ್ಷಣೆ ಪಡೆದು ಸುಖದಲ್ಲಿ ಬದುಕಬೇಕಾಗಿತ್ತೋ ಅಂತಹ ಹೆಣ್ಣುಮಗಳು ಈವಯಸ್ಸಿನಲ್ಲಿ ತಪಸ್ಸು ನಡೆಸಬೇಕಾಗಿತ್ತ?. ಜನರ ಮಾತು.

4) ಮರವಿದ್ದು ಫಲವೇನು ನೆಳಲಿದನ್ನಕ್ಕ.
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ. ಹಸುವಿದ್ದು ಫಲವೇನು
ಹಯವಿಲ್ಲದನ್ನಕ್ಕ. ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ. ಚೆನ್ನಮಲ್ಲಿಕಾರ್ಜುನಾ .

ಪದಗಳ ಅರ್ಥ

ಹಯನು-ಕರಾವು. ಹಸುಹಾಲುಕೊಡುವುದು,
ಅಗಲು-ತಟ್ಟೆ,

ಬಾನ-ಅನ್ನ

## ವಚನದ ಅರ್ಥ

ಮರವಿದ್ದು ಫಲವೇನು? ನೆಳಲಿಲ್ಲದನ್ನಕ್ಕ? ಧನವಿದ್ದು ಫಲವೇನು ದಯವಿಲ್ಲದನ್ನಕ್ಕ? ನೆಳಲಿಲ್ಲದ ಮೇಲೆ ಮರವಿದ್ದರೇನು? ಇರದಿದ್ದರೇನು? ದಯಾಗುಣ ವಿಲ್ಲದಮೇಲೆ ಹಣವಿದ್ದರೇನು ಬಿಟ್ಟರೇನು?ಹಸುವಿದ್ದು ಫಲವೇನು ಹಯನಿಲ್ಲದ ನ್ನಕ್ಕ ? ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ ? ಹಸು ಇದ್ದರೆ ಹಾಲು ಕೊಡಬೇಕು. ರೂಪು ಸೌಂದರ್ಯವಿದ್ದರೆ ಗುಣವೂ ಇರಬೇಕು. ಅಗಲಿದ್ದು ಫಲವೇನು ಬಾನವಿ ಲ್ಲದನ್ನಕ್ಕ? ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ತಟ್ಟೆಯಿದ್ದರೇನು ಅನ್ನಿಲ್ಲದ ಮೇಲೆ .ನಾನಿದ್ದರೆ ಸತ್ಯದ ಅರಿವೂ ಇರಬೇಕು.ಮನುಷ್ಯನ ಸಾರ್ಥಕತೆಯನ್ನು ಕುರಿತು ಈ ವಚನ ಹೇಳುತ್ತದೆ. ಜೀವನದಸಾರ್ಥಕತೆ ಏನು? ನಾನು ಹುಟ್ಟಿ ಏನು ಪ್ರಯೋಜನ? ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೂಲಕ ವಚನ ಮುಕ್ತಾಯ ವಾಗುತ್ತದೆ.

ಮರ ಎಂದು ಯಾವಾಗ ಹೆಸರು ಬರುತ್ತದೆ. ಸಮೃದ್ಧ ಬೆಳೆದು ರೆಂಬೆ ಕೊಂಬೆ ಎಲೆ,ಹೂವು,ಕಾಯಿ, ಫಲ ಕೊಟ್ಟು ನೆಳಲು ಕೊಡುವ ಶಕ್ತಿಗೆ ಮರ ಎಂದು ಹೆಸರು ಬರುತ್ತದೆ. ನೆಳಲು, ಫಸಲು ಕೊಡದಿದ್ದರೆ ನಿರುಪಯೋಗಿಯಾದರೆ ಅದನ್ನು ಕಡಿಯಲಾಗುತ್ತದೆ. ಮರದ ಸಾರ್ಥಕತೆ ನೆಳಲು,ಫಸಲು ಕೊಡುವಲ್ಲಿದೆ. ದಾರಿ ಪಯಣಕ್ಕೆ ಮರದ ನೆಳಲು, ಫಸಲು ಪ್ರವಾಸಿಗರಿಗೆ ನೆರವಾಗುತ್ತಿತ್ತು. ಅದು ಅಗತ್ಯವೂ ಇತ್ತು ಬಿಸಿಲು ಬಾಯಾರಿಕೆ, ದಣಿದವರಿಗೆ ಮರಗಳು ಅಶ್ರಯವಾಗಿತ್ತು. ಪ್ರಯಾಣಕ್ಕೆ ನೆರವಾಗುವ ಎತ್ತು ಕುದುರೆ, ಕೋಣ ಇತ್ಯಾದಿ ಪ್ರಾಣಿಸಂಕುಲಗಳಿಗೂ ಆಸರೆಯಾಗುತ್ತಿತ್ತು. ಆದುದರಿಮದ ಮರದ ಸಾರ್ಥಕತೆ ಫಸಲು, ನೆರಳು ಕೊಡುವುದರಲ್ಲಿ ಇತ್ತು. ಈಗ ನಡೆವ ಮತ್ತು ಬಂಡಿಪಯಣ ಇಲ್ಲ. ಮರಗಳ ಸಾಫಲ್ಯತೆ ಈಗ ಪರಿಸರ ನಿರ್ಮಾಣದ ಅಗತ್ಯದಲ್ಲಿದೆ. ಧನವಿದ್ದು ಫಲವೇನು ದಯವಿಲ್ಲದನ್ನಕ್ಕ, ಹಣವಿದ್ದರೇನು? ಕೊಡುವ ಗುಣವಿಲ್ಲದ ಮೇಲೆ. ದಯಾಪರತೆ ಬೇಕು. ಹಿಂದೆ ಎಲ್ಲರೂ ಶ್ರೀ ಮಂತರಾಗುವುದು ಕಷ್ಟವಿತ್ತು. ದಯಾಗುಣದ ಅಗತ್ಯ ಸಮಾಜಕ್ಕೆ ಬಹಳ ಇತ್ತು. ಅದರಲ್ಲೂ ಬರ ಬಂದ ಕಾಲಕ್ಕೆ ಕರುಣೆಯ ಅಗತ್ಯ ಸಮಾಜಕ್ಕೆ ಬಹಳ ಇತ್ತು. ದಯೆಯು ಬಲಹೀನರು, ದುರ್ಬಲರು, ಕಡುಬಡವರು, ಹಸಿದವರಿಗೆ ಬಹಳ ಅಗತ್ಯ ಇತ್ತು ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ ಹಸುವಿನ ಸಾರ್ಥ ಕತೆ ಕರು ಹಾಕುವುದರಲ್ಲಿ ಮತ್ತು ಹಾಲು ಕೊಡುವುದರಲ್ಲಿದೆ. ಕೇವಲ ಸಗಣಿ ಹಾಕುವುದರಲ್ಲಿಲ್ಲ. ಯಾವ ಹಸು ಕರುಹಾಕಿ ಹಾಲು ಕೊಡುವುದಿಲ್ಲ ಆಗ ಅದರ ಪೋಷಣೆಯು ಉಳುಮೆ, ಬೇಸಾಯಕ್ಕೆ ಬದಲಾವಣೆ ಗೊಳ್ಳುತ್ತದೆ. ಲೋಕದ ಎಲ್ಲ ವಸ್ತುಗಳೂ ಕೊಡುವುದರಲ್ಲಿ ಕೃತಾರ್ಥತೆ ಕಾಣುತ್ತವೆ. ರೂಪಿದ್ದು ಫಲವೇನು? ಸದ್ಗುಣವೂ ಬೇಕು. ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ, ತಟ್ಟೆ ಇದೆ. ಅನ್ನವೇ ಇಲ್ಲ. ಹಸಿವಾದಾಗ ಅನ್ನ ಬೇಕು. ಹಾಗೆಯೆ ನಾನಿದ್ದು ಫಲವೇನು? ನಿಮ್ಮ ಜ್ಞಾನವಿ ಲ್ಲದನ್ನಕ್ಕ. ಚೆನ್ನಮಲ್ಲಿಕಾರ್ಜುನನೆ ನಿನ್ನ ದರ್ಶನವಿಲ್ಲದ ಮೇಲೆ ನಾನು ಇದ್ದರೇನು?ಹೋದರೇನು?ನಿನ್ನ ದರ್ಶನ ನನಗಾಗಬೇಕು ಇದು ಅಕ್ಕನವರ ಹಂಬಲ.

5)ಮನ ಬೀಸರವಾದರೆ ಪ್ರಾಣ ಪಲ್ಲಟವಹುದವ್ವ.
ತನು ಕರಣಂಗಳು ಮೀಸಲಾಗಿ ಮನ ಸಮರಸವಾಯಿತ್ತು ನೋಡಾ.
ಅನ್ಯವನರಿಯೆ ಭಿನ್ನವನರಿಯೆ. ಎನ್ನ ದೇವ ಚೆನ್ನಮಲ್ಲಿಕಾರ್ಜುನನ
ಬಳಿಯವಳು ಕೇಳಾ ತಾಯೆ.

## ಪದಗಳ ಅರ್ಥ

ಬೀಸರ-ನಷ್ಟ ಇಲ್ಲವಾಗುವುದು.
ಪಲ್ಲಟ-ಆದಲು ಬದಲು.
ಮೀಸಲು-ಮುಡಿಪು

## ವಚಪದ ಅರ್ಥ

'ಮನಬೀಸರವಾದರೆ ಪ್ರಾಣ ಪಲ್ಲಟವಹುದವ್ವ. ತನು ಕರಣಂಗಳು ಮೀಸಲಾಗಿ ಮನ ಸಮರಸವಾಯಿತ್ತು ನೋಡಾ. ಮನ ನಷ್ಟವಾದರೆ, ಪ್ರಾಣವೂ ಮರುಹುಟ್ಟು ಪಡೆಯುತ್ತದೆ. ಅಂದರೆ ಪ್ರಾಣನಿಗೆ ಆರೋಪಿತವಾಗಿದ್ದ ದೇಹಗುಣಗಳು ಹೋಗುತ್ತವೆ.ತನು,ಮನ, ಇಂದ್ರಿಯಗಳು ಪರಮಾತ್ಮದ ಭಾವಕ್ಕೆ ಮೀಸಲಾಗುತ್ತವೆ. ಆಗ ಪ್ರಾಣನು ಬ್ರಹ್ಮದ ಭಾವದಲ್ಲಿ ಸಮರಸ. ಅನ್ಯವನರಿಯೆ ಭಿನ್ನವನರಿಯೆ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನ ಬಳಿಯವಳಾನು. ಚೆನ್ನಮಲ್ಲಿಕಾರ್ಜುನನ ಹೊರತು ಇನ್ನೊಂದು ತಿಳಿಯೆ ಭಿನ್ನಭಾವವನ್ನೂ ಅರಿಯೆ. ನಾನು ಅವನ ಬಳಿಯವಳು. ಇದೆ ಉತ್ತರವನ್ನು ಅಕ್ಕಮಹಾದೇವಿಯವರು ಅನು ಭಾವಜೀವನಕ್ಕೆ ಬಂದಾಗ ಶರಣರು, ಶರಣೆಯರು ಯೋಗಿಗಳು , ಶ್ರೀ ಶೈಲದ ಗುಹೆಯಲ್ಲಿ ಅಕ್ಕಮಹಾದೇವಿಯವರನ್ನು ನೋಡಲು ಅನೆಕರು ಬರುತ್ತಿದ್ದರು, ಸರ್ವಸಂಗ ಪರಿತ್ಯಾಗಿಯಾಗಿ ಏನು ಸಾಧಿಸಿದಿರಿ? ನಮಗೂ ತಿಳಿಸಿ. ಉತ್ತರ ಈ ವಚನ. ಮನಬೀಸರವಾದರೆ ಪ್ರಾಣ ಪಲ್ಲಟವಹುದವ್ವ ಮನಸ್ಸು ಎಲ್ಲಿಯವರೆಗೆ ಲೌಕಿಕವಾಗಿವರ್ತಿಸುತ್ತದೆ ಲೋಕದ ಮೋಹ ಹೆಚ್ಚುತ್ತ ಹೋಗುತ್ತದೆ. ಜೀವ ಏಳುವುದಕ್ಕೂ ಬೀಳುವುದಕ್ಕೂ ಮನಸ್ಸೇ ಕಾರಣ. ಮೊದಲು ಮನಸ್ಸನ್ನು ಸಾಧಿಸಿ ಕೊಳ್ಳಬೇಕು. ಮನಸ್ಸನ್ನು ನಿಗ್ರಹಿಸುವ ಶಕ್ತಿ ಬಂತು ಎಲ್ಲವೂ ಬಂತು.

ಮನ ಬೀಸರವಾದರೆ ಪ್ರಾಣ ಪಲ್ಲಟವಹುದವ್ವ ಮನಸ್ಸು ಎಲ್ಲಿಯವರೆಗೆ ಲೌಕಿಕವಾಗಿಯೆ ವರ್ತಿಸುತ್ತದೆ ಅಲ್ಲಿಯವರೆಗೆ ಲೌಕಿಕ ಬಿಡುವುದಿಲ್ಲ. ಉರಿಯಲ್ಲಿ ಕರ್ಪೂರ ಅಡಗಿದಂತೆ ಮನಸ್ಸು ಬ್ರಹ್ಮಭಾವದದಲ್ಲಿ ಲಯವಾಗಬೇಕು. ಆಗ ತಂತಾನೆ ಜೀವ ಭಾವದ ಎಲ್ಲ ಸಂಬಂಧಗಳು ಹೋಗಿಬಿಡುತ್ತವೆ.

ಆ ದಾರಿ ಮುಂದುವರಿ ಸುವುದು ಹೇಗೆ ?ವಚನದ 2ನೆ ಸಾಲು ಉತ್ತರ ಕೊಡುತ್ತದೆ. ತನು ಕರಣಂಗಳು ಮೀಸಲಾಗಿ ಮನಕರಣಂಗಳು ಮೀಸಲಾಗಿ ಸಮರಸವಾಯಿತ್ತು ನೋಡಾ. ದೇಹ ಮತ್ತು ಇಂದ್ರಿಯಗಳನ್ನು ಬ್ರಹ್ಮದ ಅನುಭವಕ್ಕಾಗಿಯೇ ಮೀಸಲಿರಿಸಬೇಕು. ಉಳಿದ ಲೌಕಿಕ ನಿಲ್ಲಿಸಬೇಕು. ಲೌಕಿಕದಲ್ಲಿ ಕ್ರಿಯೆ ಪ್ರತಿಕ್ರಿಯೆ ಹೋದಾಗ ಮನ ಬ್ರಹ್ಮದಲ್ಲಿ ವಿಹಾರ

'ಮಾಡುತ್ತದೆ. ಅನ್ಯವನರಿಯೆ ಭಿನ್ನವನರಿಯೆ. ಇದು ಸಮರಸದ ಸ್ಥಿತಿ. ಇದನ್ನೆ ಭಾವ ಸಮಾಧಿ ಎನ್ನುವುದು. ಈಭಾವಸಮಾಧಿಯಿಂದ ಉತ್ಥಾನಗೊಂಡಮೇಲೆ ಅನುಭಾವಿ ಯಾರು? ಚೆನ್ನಮಲ್ಲಿಕಾರ್ಜುನನ ಬಳಿಯವಳಾನು.

6).ಮುಂಗೈಯಲ್ಲಿ ವೀರಗಂಕಣವನಿಕ್ಕಿ ಮುಂಗಾಲಲ್ಲಿ ತೊಡರುಬಾವುಲಿಯ ಕಟ್ಟಿದೆ. ಗಂಡುಡಿಗೆಯನುಟ್ಟೆನೆಂಬ ಮಾತಿನ ಬಿರಿದ ನುಂಗಿದೆನು. ಚೆನ್ನಮಲ್ಲಿಕಾರ್ಜುನಾ ನಿಮ್ಮಾಣೆಗೆ ಊಣೆಯವ ತಂದೆನಾದಡೆ ನಿಮ್ಮ ತೊತ್ತಿನ ಮಗಳಲ್ಲಯ್ಯ.

## ಪದಗಳ ಅರ್ಥ

ತೊಡರುಬಾವುಲಿ-ಕಾಲಿಗೆ ವೀರಗಂಕಣ. ವೇಳೆವಾಳಿವಾದ ಯೋಧನು ಪ್ರಾಣ ವಿರುವವರೆಗೆ ಜಯಲಭಿಸುವವರೆಗೆ ಹೋರಾಡುವುದಕ್ಕಾಗಿ ಕಟ್ಟುವ ಕಾಲಕಡ .
ಊಣೆ-ದೋಷ
ಬಿರುದು- ಘೋಷ, ಆಪಾದನೆ.

## ವಚಪದ ಅರ್ಥ

ಮುಂಗೈಯಲ್ಲಿ ವೀರಗಂಕಣವನಿಕ್ಕಿ ಮುಂಗಾಲಲಿ ತೊಡರುಬಾವಲಿಯ ನಿಕ್ಕಿದೆ. ಮುಂಗೈಯಲ್ಲಿ ವೀರಗಂಕಣ ಕಟ್ಟಿದ್ದೇನೆ. ಮುಂಗಾಲಿಗೆ ತೊಡರುಬಾವುಲಿಯ ಕಟ್ಟಿದ್ದೇನೆ. ಕೈಗೆ ಕಟ್ಟಿದ ಕಂಕಣ ವೀರತ್ವದ್ದು. ಕಾಲಿಗೆ ಕಟ್ಟಿದ್ದು ನಾನು ನನ್ನನ್ನು ಪರಮಾತ್ಮನಿಗೆ ಮೀಸಲಿರಿಸಿಕೊಂಡಿದ್ದೇನೆ ಎಂಬ ವೇಳೆವಾಳಿಸೂಚಕದ ಕಾಲಡಗ.ಪ್ರಾಣವನ್ನು ಪಣಕ್ಕಿಟ್ಟು ಅನುಭಾವಯುದ್ದ ಗೆಲ್ಲುತ್ತೇನೆ. ಗಂಡುಡಿಗೆಯನುಟ್ಟೆ ನೆಂಬ ಮಾತಿನ ಬಿರುದ ನುಂಗಿದೆನು. ಗಂಡುಬೀರಿ ಇವಳು. ಗಂಡುಡುಗೆಯನುಟ್ಟಳು ಎಂದು ಜನರು ಮಾತನಾಡಲಿ. ಅಂತಹ ಮಾತುಗಳನ್ನು ನುಂಗಿಕೊಳ್ಳುತ್ತೇನೆ.ಚೆನ್ನಮಲ್ಲಿಕಾರ್ಜುನ ನಿಮ್ಮಾಣೆಗೆ ಊಣೆಯವ ತಂದೆನಾದಡೆ ನಿಮ್ಮ ತೊತ್ತಿನ ಮಗಳಲ್ಲಯ್ಯ. ಒಡೆಯನೆ ನಿನಗೆ ಆಣೆಮಾಡಿ ಹೇಳುತ್ತಿದ್ದೇನೆ. ಕೊಟ್ಟಮಾತಿಗೆ ತಪ್ಪದಂತೆ ನಡೆದು ಕೊಳ್ಳದಿದ್ದರೆ ನಾನು ನಿಮ್ಮ ಸೇವಕರ ಮಗಳಲ್ಲ ಎಂದು ತಿಳಿಯಿರಿ. ಅಕ್ಕನವರಿಗೆ ಪರಮಾತ್ಮನನ್ನು ಸಾಧಿಸಿಯೆ ತೀರಬೇಕೆಂಬ ಛಲ ಮೂಡಿದೆ.ಕಾದಿಗೆಲುವೆನು ಕಾದಿಗೆಲುವೆನು. ಜನರು ಅಕ್ಕನವರ ಆಧ್ಯಾತ್ಮಸಾಧನೆಯಬಗೆಗೆ ಲಘುವಾಗಿ ಮಾತನಾಡುವುದು ಕಿವಿಗೆ ಬಿದ್ದಿರಬೇಕು. ಇತರ ಆಧ್ಯಾತ್ಮ ಜೀವಿಗಳೂ ಕೀಟಲೆ ಮಾಡಿರಬಹುದು. ಅಲ್ಲದೆ ಪರಮಾತ್ಮನನ್ನು ಸಾಧಿಸಿಕೊಂಡ ಮಹಾತ್ಮರು ಏರಿದ ಎತ್ತರ ಕೂಡ ಸ್ಫೂರ್ತಿ ನೀಡಿರಬಹುದು. ನಾನು ಹೆಣ್ಣು ಎನ್ನುವ ಕಾರಣಕ್ಕೆ ಆಧ್ಯಾತ್ಮ ಸಾಧಿಸಲು ಬರುವುದಿಲ್ಲ ಎಂದು ಮೂಲಭೂತವಾದಿಗಳು ಆಡಿಕೊಂಡಿರಬಹುದು . ಇವೆಲ್ಲಕ್ಕೆ ಉತ್ತರ ಈವಚನ ಮುಂಗೈಗಳಿಗೆ ವೀರಕಂಕಣ ಕಟ್ಟಿದ್ದೇನೆ. ಕಾಲುಗಳಿಗೆ ವೀರಕಂಕಣ ಕಟ್ಟಿದ್ದೇನೆ. ಗಂಡುಬೀರಿ ಗಂಡಸರ ಹಾಗೆ ಕಾವಿ ಹಾಕಿದಳು ನೋಡು . ಎಂದು ಇತರರು ಅಂದಿರಬಹುದು. ಗಂಡುವೇಷ ತೊಟ್ಟಳು ಎನ್ನುವ ಮಾತುಗಳನ್ನು ದಾಟಿದೆನು. ಪರಮಾತ್ಮ ಚೆನ್ನಮಲ್ಲಿಕಾರ್ಜುನನೆ ನಿಮ್ಮಾಣೆಗೆ ನಾನು ಭಂಗ ತರುವುದಿಲ್ಲ.

ಹಾಗೇನಾದರೂ ನಿನಗೆ ಅನುರೂಪಳಾಗಿ ನಡೆಯದಿದ್ದರೆ ನಾನು ನಿನ್ನಮಗಳಲ್ಲ. ನಾನು ನಿನ್ನ ಸೇವಕಿಯ ಮಗಳೂ ಅಲ್ಲ ತಿಳಿದುಕೊ.

7).ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ.
ಅಸ್ತಮಾನದಿಂದ ಮೇಲೆ ಜಿತೇಂದ್ರಿರಿಲ್ಲ.
ವಿಧಿಯ ಮೀರುವ ಅಮರರಿಲ್ಲ.
ಕ್ಷುಧೆ, ವಿಧಿ, ವ್ಯಸನಕ್ಕಂಜಿ ನಾನಿಮ್ಮ ಮೊರೆಹೊಕ್ಕೆ.
ಇನ್ನು ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ. ಹಿರಿಯ-ರಾಗಾದಿಗಳನ್ನು ಗೆದ್ದವರು.

## ಪದಗಳ ಅರ್ಥ

ಜಿತೇಂದ್ರಿಯ-ಇಂದ್ರಿಯಗಳನ್ನು ಗೆದ್ದವರು.
ವಿಧಿ-ಕರ್ಮ; ಕಾಲ,
ಅಮರ-ಮುಪ್ಪುಸಾವು, ರೋಗಾದಿಗಳನ್ನು ಗೆದ್ದ ವರು. ಕ್ಷುಧೆ-ಹಸಿವು
ವ್ಯಸನ-ದುಶ್ಚಟಗಳು.

## ವಚನದ ಅರ್ಥ

ಮಧ್ಯಾನದಿಂದ ಮೇಲೆ ಹಿರಿಯರಿಲ್ಲ ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ. ಮಧ್ಯಾನ್ಹ ಆಗುತ್ತಿದ್ದ ಹಾಗೆ ಹಸಿವು ಬಲವಾಗಿ ಕಾಡುತ್ತದೆ. ಊಟಕೊಡದೆ ಹೋದರೆ ಸಿಟ್ಟು ನೆತ್ತಿಗೇರಿಬಿಡುತ್ತದೆ. ಸೂರ್ಯಮುಳುಗಿದ. ಮನುಷ್ಯ ವ್ಯಸನ,ರಾಗಗಳಿಗೆ ದಾಸನಗಿಬಿಡುತ್ತಾನೆ. ವಿಧಿಯ ಮೀರುವ ಅಮರರಿಲ್ಲ. ಹಣೆಬರಹ ಹರಿಯನ್ನೂ ಬಿಡಲಿಲ್ಲ ಬ್ರಹ್ಮನನ್ನು ಬಿಡಲಿಲ್ಲ. ಇಂದ್ರ, ಚಂದ್ರನನ್ನೂ ಬಿಡಲಿಲ್ಲ. ಎಲ್ಲರೂ ವಿಧಿಗೆ ಒತ್ತೆಯಾಳುಗಳು. ಕ್ಷುಧೆ, ವಿಧಿ, ವ್ಯಸನಕ್ಕಂಜಿ ನಾನಿಮ್ಮ ಮೊರೆಹೊಕ್ಕೆ . ನಾನು ಈಹಸಿವುವಿಧಿ,ವ್ಯಸನಗಳಿಗೆ ಹೆದರಿ ನಿಮ್ಮ ಮೊರೆಹೊಕ್ಕಿದ್ದೇನೆ ಇನ್ನು ಬದುಕಿದೆ ಕಾಣಾ ಚೆನ್ನಮಲ್ಲಿಕಾರ್ಜುನಾ. ಇನ್ನು ನಾನು ನಿಶ್ಚಿಂತಳು. ನನ್ನ ಹೊಣೆ ನಿನ್ನದು. ಜೀವನ ಸಮುದ್ರಕ್ಕೆ ದುಮುಕಿದ ಮೇಲೆ ವಾಸ್ತವದ ಅನುಭವವಾಗಲೆ ಬೇಕು. ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ. ಹಸಿವು ಹಾಗೂ ಹೀಗೂ ಮಧ್ಯಾಹ್ನದವರೆಗೆ ತಡೆಹಿಡಿಯುತ್ತಾರೆ. ಸೂರ್ಯ ಇಳಿಯತೊಡಗಿದಂತೆ ಹಸಿವು ಬಾಧಿಸುತ್ತಹೋಗುತ್ತದೆ. ಹಸಿವು ಹಿಂಗದೆ ಹೋದರೆ ಕೋಪ, ಅಸಹನೆ ಎಲ್ಲವೂ ಬರುತ್ತದೆ. ಅಂದರೆ ಹಸಿವು ಎಂತಹ ವಿವೇಕಿಗಳನ್ನೂ ದೇಹಾದೀನರನ್ನಾಗಿ ಮಾಡಿಬಿಡುತ್ತದೆ. ಹಿರಿಯರು ಎಂದರೆ ತಾಳ್ಮೆ, ವಿವೇಕವಿದ್ದವರು. ಹಸಿವೆ

ಹಿಂಗದೆಹೋದರೆ ಅಂತಹ ಹಿರಿಯರು ಹಿರಿಯತನ ಕಳೆದುಕೊಂಡುಬಿಡುತ್ತಾರೆ. ಅಸ್ತಮಾನದಿಂದಮೇಲೆ ಜಿತೇಂದ್ರಿಯರಿಲ್ಲ. ಸೂರ್ಯಾಸ್ತವಾಗುತ್ತಿದ್ದಂತೆ ಎಂತಹವರೂ ರಾಗಾದಿಗಳಲ್ಲಿ ಮಗ್ನರಾಗುತ್ತಾರೆ. ಲೋಕದಲ್ಲಿ ಸಾವು,ಮುಪ್ಪು ರೋಗವನ್ನು ಗೆದ್ದವರು ಯಾರೂ ಇಲ್ಲ. ಈ ಹಸಿವು,ರೋಗ,ಮುಪ್ಪು, ಸಾವು,ಕರ್ಮ ಇವುಗಳನ್ನು ಗೆಲ್ಲಲು ಚೆನ್ನಮಲ್ಲಿಕಾರ್ಜುನನೆ ನಿನ್ನ ಮೊರೆ ಹೊಕ್ಕಿದ್ದೇನೆ. ರಕ್ಷಿಸು .ಕಾಪಾಡು. ಅವರ ಧೋರಣೆಗಳು ವಾಸ್ತವವಾಗಿವೆ. ಪುರಾಣಗಳಿಂದ ಮುಕ್ತವಾದ ಚಿಂತನೆ ಇದು.

8)ಮಾಟ ಮದುವೆಯ ಮನೆ .ದಾನ ಧರ್ಮ ಸಂತೆಯ ಪಸಾರ.
ಸಾಜ ಸಾಜೇಶ್ವರಿ ಸೂಳೆಗೇರಿಯ ಸೊಬಗು. ವ್ರತನೇಮವೆಂಬುದು ವಂಚನೆಯ ಲುಬ್ಧವಾಣಿ. ಭಕ್ತಿಯೆಂಬುದು ಬಾಜಿಗರಾಟ. ನಾನರಿಯದೆ ಹುಟ್ಟಿದೆ.
ಹುಟ್ಟಿ ಹುಸಿಗೀಡಾದೆ. ಹುಸಿ ವಿಷಯದೊಳಡಗಿತ್ತು.
ವಿಷಯ ಮಸಿ ಮಣ್ಣಾಯಿತ್ತು.
ನಿನ್ನ ಗಸಣೆಯನೊಲ್ಲೆ ಹೋಗಾ ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಮಾಟ-ಆಡಂಬರ,
ಪಸಾರ-ಸುದ್ದಿ,
ಸಾಜ-ವೈಯಾರ, ಬಡಿವಾರ.
ಲುಬ್ಧ-ಯಾಚಕ ಬೇಡುವವ.
ವ್ರತ-ಆಚರಣೆ,
ನೇಮ- ಪದ್ಧತಿ, ನಿಯಮ
ಬಾಜಿ-ಪಂದ್ಯ.
ಗಸಣೆ-ಪರೀಕ್ಷೆ, ದಾಕ್ಷಿಣ್ಯ.
ವಿಷಯ-ಪಂಚ ವಿಷಯಗಳು .

## ವಚನದ ಅರ್ಥ

ಮಾಟ ಮದುವೆಯ ಮನೆ. ದಾನಧರ್ಮ ಸಂತೆಯ ಪಸಾರ. ಮದುವೆ ಮನುಷ್ಯನ ಜೀವನದಲ್ಲಿ ಅನಿವಾರವಾದ ಒಂದು ಘಟ್ಟ ಆದರೆ ಮನುಷ್ಯನು ತನ್ನ ವೈಭವ ತೋರಿಸಲು ಮದುವೆ ಒಂದು ವೇದಿಕೆ ಮಾಡಿಕೊಂಡಿದ್ದಾನೆ. ದಾನವು ನಮ್ಮನ್ನು ಅಂತಃಕರಣವುಳ್ಳವರನ್ನಾಗಿ ಮಾಡುತ್ತದೆ.
ಪುಣ್ಯಶಾಲಿಗಳನ್ನಾಗಿಯೂ ಮಾಡುತ್ತದೆ. ಆದರೆ ಮನುಷ್ಯನಿಗೆ ನಾನು ಇಷ್ಟು ದಾನಮಾಡಿದೆ ನಾನು ದಾನ ಶೂರ ಎನ್ನುವ ಕೀರ್ತಿಬೇಕು. ಪ್ರಚಾರಕ್ಕಾಗಿ ದಾನ ಮಾಡುತ್ತಾರೆ. ಕೆಲವರು
ಪ್ರಚಾರವಿಲ್ಲವಾದರೆ ದಾನ ಕೊಡುವುದೆ ಇಲ್ಲ. ಸಾಜ ಸಾಜೇಶ್ವರಿ ಸೂಳೆಗೇರಿಯ ಸೊಬಗು ಥಳುಕು ಬಳುಕಿನ ಸೊಬಗು ಸೂಳೆಗೇರಿಯದು. ಅಲ್ಲಿ ಸಹಜ

ಚೆಲುವಿಲ್ಲ.ಕೃತಕಾಲಂಕಾರವಿರುತ್ತದೆ. ವ್ರತನೇಮವೆಂಬುದು ವಂಚನೆಯ ಲುಬ್ಧವಾಣಿ, ಅನೇಕರು ವ್ರತ ನೇಮಗಳನ್ನು ಆಚರಿಸುತ್ತಾರೆ. ಕೆಲವರು ಹಣ, ಆಶೆಗಳ ನೆರವೇರಿ ಕೆಗಾಗಿಯೆ ವ್ರತ ಆಚರಿಸುತ್ತಾರೆ. ವ್ರತಗಳನ್ನು ಪರಮಾತ್ಮನನ್ನೆ ಪಡೆಯುವುದಕ್ಕಾಗಿ ಯಾರೂ ಆಚರಿಸುವುದಿಲ್ಲ. ಬೇಡುವುದಕ್ಕಾಗಿ ವ್ರತ ಆಚರಿಸುತ್ತಾರೆ. ಇದು ವ್ರತ ವಾಗುವುದಿಲ್ಲ. ಆಶೆಯ ಪೂರೈಕೆಯಿದು. ಭಕ್ತಿಯೆಂಬುದು ಬಾಜಿಗರಾಟ. ಇನ್ನು ಕೆಲವರು ಭಕ್ತಿ ಮಾಡುತ್ತಾರೆ. ಇದು ಒಂದು ರೀತಿ ಜೂಜಿನಂತಿರುತ್ತದೆ. ಭಕ್ತಿಯೆಂದರೆ ನಾನು ಇಷ್ಟು ಭಕ್ತಿಮಾಡುತ್ತೇನೆ ನೀನು ಎಷ್ಟು ಕೊಡುತ್ತೀಯ? ಎಂಬಂತಾಗಿದೆ. ಇದು ಭಕ್ತಿಯಲ್ಲ. ಭಕ್ತಿಯೆಂದರೆ ಪರಿಪೂರ್ಣತೆ ಪಡೆಯುವುದಾಗಬೇಕು. ನಾನರಿಯದೆ ಹುಟ್ಟಿದೆ. ಹುಟ್ಟಿ ಹುಸಿಗೀಡಾದೆ. ನಾನು ತಿಳಿಯದೆ ಹುಟ್ಟಿದ್ದೇನೆ. ಹುಟ್ಟಿದ ಕಾರಣ ಸುಳ್ಳಿಗೆ ಒಳಗಾದೆ. ಹುಸಿ ವಿಷಯದೊಳಡಗಿತ್ತು. ವಿಷಯ ಮಸಿ ಮಣ್ಣಾಯಿತ್ತು. ಈ ಸುಳ್ಳು ಹೇಳುವುದು ಯಾಕೆ ? ವಿಷಯಾದಿಗಳ ಭೋಗಕ್ಕಾಗಿ . ವಿಷಯದಲ್ಲಿ ಸಿಕ್ಕಿದ ಮನುಷ್ಯನು ಮಣ್ಣಲ್ಲಿ ಮಣ್ಣಾಗಿ ಹೋಗುತ್ತಾರೆ.ನಿನ್ನ ಗರಣೆಯ ನೊಲ್ಲೆ ಹೋಗಾಚೆನ್ನಮಲ್ಲಿಕಾರ್ಜುನಾ. ನಿನ್ನ ಹಂಗು ಬೇಡ. ನಿನ್ನ ಸಹವಾಸವೂ ಬೇಡ ಹೋಗು.ಅಕ್ಕ ಮಹಾದೇವಿಯವರು ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅಸಹಜ ಭಕ್ತಿಯನ್ನು ತಿರಸ್ಕರಿಸಿದ್ದಾರೆ. ಈ ಅಸಹಜ ಭಕ್ತಿ ಒಂದೆ ?ಎರಡೆ.? ಅದು ಎಲ್ಲ ಕಡೆ ವ್ಯಾಪಿಸಿದೆ . ಕೆಲವರು ಇಂತಹ ಅಸಹಜ ಭಕ್ತಿಯನ್ನು ಹೆಚ್ಚು ಪ್ರಚಾರ ಮಾಡಿ ಬೆಳೆಸುತ್ತಾರೆ. ಇದರಿಂದ ಅವರಿಗೆ ಲಾಭವಿದೆ. ಅಕ್ಕಮಹದೇವಿಯವರು ನಡೆ ಸುತ್ತಿರುವ ಭಕ್ತಿ ಪರಮಾತ್ಮನನ್ನು ಪಡೆಯುವ ಗುರಿಯ ಭಕ್ತಿಯಾಗಿದೆ. ಆದುದರಿಂದ ಅವರು ಪರಿಪೂರ್ಣತೆಯ ಕಡೆಗೆ ಸಾಗಿದರು. ಲಾಭಕ್ಕಾಗಿ ನಿನ್ನ ಪೂಜಿಸುತ್ತಿಲ್ಲ .
ನಿನಗಾಗಿ ನಿನ್ನ ಪೂಜಿಸುತ್ತಿದ್ದೇನೆ. ಇದು ಅವರ ಭಕ್ತಿ.

9).ಮಚ್ಚು ಅಚ್ಚುಗವಾಗಿ ಒಪ್ಪಿಪ್ಪ ಪರಿಯ ನೋಡಾ.
ಎಚ್ಚಡೆ ಗರಿದೋರದಂತಿರಬೇಕು.
ಅಪ್ಪಿದರೆ ಅಸ್ಥಿಗಳು ನುಗ್ಗು ನುರಿಯಾಗಬೇಕು.
ಬೆಚ್ಚಡೆ ಬೆಸುಗೆ ಗರಿದೋರದಂತಿರಬೇಕು.
ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನನ ಸ್ನೇಹ ತಾಯೆ.

### ಪದಗಳ ಅರ್ಥ

ಮಚ್ಚು-ಪ್ರೀತಿ. ಅಚ್ಚುಗ-ಇಷ್ಟ.ಹಿತ.ಎಚ್ಚಡೆ-ಎಸೆದರೆ, ಹೊಡಎ
ಗರಿ-ಬಾಣ
ಅಸ್ಥಿ-ಎಲುವು,ಮೂಳೆ . ಬೆಚ್ಚಡೆ-ಬೆಸುಗೆಹಾಕಿದರೆ .
ಮಚ್ಚು-ಪ್ರೀತಿ.

### ವಚನದ ಅರ್ಥ

ಮಚ್ಚು ಅಚ್ಚುಗವಾಗಿ ಒಪ್ಪಿಪ್ಪ ಪರಿಯ ನೋಡಾ.ಪ್ರೀತಿಯೆ ಇಷ್ಟಸರ್ವಸ್ವವಾಗಿರುವ ರೀತಿಯನ್ನು ನೋಡಿರಿ. ಎಚ್ಚಡೆ ಗರಿದೋರದಂತಿರಬೇಕು. ಅಪ್ಪಿದಡೆ ಅಸ್ತಿಗಳು ನುಗ್ಗು ನುರಿಯಾಗಬೇಕು. ಬಾಣ ಹೊಡೆದರೆ ಪೂರ್ಣವಾಗಿ ಬಾಣ ನಾಟಿಬಿಡ ಬೇಕು.ಅಪ್ಪಿಕೊಂಡರೆ ಮೂಳೆಗಳೆಲ್ಲ ಲಟಲಟಲ ಮುರಿದು ಹೋಗುವಂತೆ ಅಪ್ಪಿ ಕೊಳ್ಳಬೇಕು. ಬೆಚ್ಚಡೆ ಬೆಸುಗೆ ಯರಿಯದಂತಿರಬೇಕು. ಇಬ್ಬರ ಬೆಸುಗೆಯಾದರೆ ಇಬ್ಬರಲ್ಲ ಒಬ್ಬರೆ ಎನ್ನುವಂತಿರಬೇಕು. ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನನ ಸ್ನೇಹ ತಾಯೆ.ತಾಯಿಯೆ ಕೇಳಿರಿ.ನನಗೆ ಚೆನ್ನಮಲ್ಲಿಕಾರ್ಜುನನ ಪ್ರೀತಿ ಇಷ್ಟವಾಗಿದೆ . ಇವೆಲ್ಲ ಸತಿಪತಿ ಭಾವದ ವಚನಗಳು. ಜೀವದ ಮೇಲೆ ದೇಹದ ಪ್ರಭುತ್ವ ಎಷ್ಟು ಅಧಿಕ ಎನ್ನುವುದಕ್ಕೆ ಯೌವನದ ದಿನಗಳ ಈ ವಚನಗಳೆ ಸಾಕ್ಷಿ, ವಿರಾಗಿಯಾದ ಅಕ್ಕ ಲೌಕಿಕ ಗಂಡನನ್ನು ನಿರಾಕರಿಸಿ ಸಾವು ಕೇಡು ಇಲ್ಲದ ಅತಿಚೆಲುವನಾದ ಚೆನ್ನ ಮಲ್ಲಿಕಾರ್ಜುನನನ್ನು ಪತಿಯನ್ನಾಗಿ ಪಡೆಯಬೇಕೆನ್ನುವ ಉತ್ಕಟ ಅಪೇಕ್ಷೆ ಉಪಮೆಗೂ ಸಿಗದ ವ್ಯಾಪ್ತಿಯುಳ್ಳದ್ದು. ದೇಹಮತ್ತು ಕಾಲದ ಬಂಧಿಯಾದ ಮನುಷ್ಯನ ಬದುಕು ಪ್ರೀತಿಯಿಂದ ದಿಕ್ಕು ಬದಲಾಗುವುದು ಎನ್ನುವುದಕ್ಕೆ ಅಕ್ಕನವರ ಬದುಕು ಒಂದು ಉದಾಹರಣೆ. ಶೂರ, ಧೀರ, ಸುಂದರ, ರಾಜ, ತರುಣ, ಅತಿಚೆಲುವ ಪತಿ ಯಾಗುತ್ತೇನೆಂದರೂ ಒಲ್ಲದೆ ಪರಮಾತ್ಮನಿಗಾಗಿಯೆ ತುಡಿದ ಚೇತನ ಅಕ್ಕಮಹಾ ದೇವಿಯವರದು. ಪರಮಾತ್ಮನೊಂದಿಗೆ ಸಂಸಾರ ಮಾಡುತ್ತೇನೆಂಬ ಆ ಮನೋಬಲ ಅದೆಷ್ಟು ಅದ್ಭುತ!ಅಮೋಘ.!ಆಶ್ಚರ್ಯವಾಗುತ್ತದೆ. ಪರಮಾತ್ಮನೊಂದಿಗೆ ಸಂಸಾರ ನಡೆಸುವ ಕನಸುಗಳನ್ನು ಕಟ್ಟಿದ ಅಕ್ಕ, ಮನುಷ್ಯರೂಪದಲ್ಲಿ ಅವನು ದೊರೆ ಯುವುದಿಲ್ಲ ಎನ್ನುವ ಸತ್ಯ ದರ್ಶನವನ್ನು ಕಂಡು ವಿಷಾದ, ವಿಷಣ್ಣತೆಯಲ್ಲಿ ದಿವ್ಯ ಮೌನ ತಾಳಿದರು. ಬಹುಕಾಲದ ಈ ಮೌನ ಶ್ರೀ ಶೈಲದ ಗುಹೆಯಲ್ಲಿ ತಪಸ್ಸಿನ ಮೂಲಕ ಹೊರದಾರಿ ಪಡೆದು ಲೋಕಕ್ಕೆ ಬೆಳಕು ನೀಡಿದರು.

10). ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು.
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು.
ಇಂತಪ್ಪ ಮಹಾನುಭಾವರ ಅನುಭಾವವ ತೋರಿ ಎನ್ನನುಳುಹಿಕೊಳ್ಳ
ಚೆನ್ನಮಲ್ಲಿಕಾರ್ಜುನಾ.

## ಪದಗಳ ಅರ್ಥ

ಮಥನಿಸಿ-ಉಜ್ಜಿ ತಿಕ್ಕಿ, ಘರ್ಷಿಸಿ, ಚರ್ಚಿಸಿ. ಅನುಭಾವ-ಭಕ್ತಿಜ್ಞಾನ ಸಹಿತವಾದ ಅರಿವು. ಹೊದ್ದು-ಸಮೀಪಿಸು, ಹತ್ತಿರ .
ತನುಗುಣ-ದೇಹದ ಗುಣಧರ್ಮಗಳು.. ಉದಾ:ಅರಿಷಡ್ವರ್ಗಗಳು, ಸ್ವಾರ್ಥ ಇತ್ಯಾದಿ ಭಾವಗಳು. ಉಳುಹು-ಬದುಕಿಸು.

### ವಚನದ ಅರ್ಥ

ಮರಮರ ಮಥನಿಸಿ ಕಿಚ್ಚು ಹುಟ್ಟಿ ಸುತ್ತಣ ತರುಮರಾದಿಗಳ ಸುಡಲಾಯಿತ್ತು. ಮರಮರ ತಿಕ್ಕಿದಾಗ ಅಲ್ಲಿ ಕಿಡಿ ಅಗ್ನಿ ಹೊತ್ತಿತ್ತು. ಕಾಡಿಚ್ಚು ಹೀಗೆಹೊತ್ತಿ ಕೊಳ್ಳುತ್ತಿತ್ತೆಂದು ಪ್ರತೀತಿ . ಮರಗಳ ಘರ್ಷನೆಯಿಂದಲೆ ಹುಟ್ಟಿದ ಅಗ್ನಿ ಆ ಮರಗಳನ್ನೆ ಸುಟ್ಟು ಹಾಕುತ್ತಿತ್ತು.ಆತ್ಮ ಆತ್ಮಮಥನಿಸಿ ಅನುಭಾವ ಹುಟ್ಟಿ ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು. ಹಾಗೆ ಆತ್ಮ ಆತ್ಮಗಳ ಸಮ್ಮಿಲನದಿಂದ ಅನುಭಾವದ ಉದಯ. ಈ ಅನುಭಾವವು ವ್ಯಕ್ತಿಯ ಹೀನಗುಣಗಳನ್ನೆಲ್ಲ ಕಳೆದುಬಿಡುತ್ತವೆ. ವ್ಯಕ್ತಿಯು ಉದಾತ್ತನೂ, ಶ್ರೇಷ್ಠನೂ ಆಗುವುದು ದುರ್ಗುಣಗಳನ್ನೆಲ್ಲ ನಾಶಮಾ ಡಿಕೊಂಡಾಗ ಮಾತ್ರ. ಇಂತಪ್ಪ ಮಹಾನುಭಾವರ ಮಹಾನುಭಾವವ ತೋರಿ ಎನ್ನ ನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ. ಆದುದರಿಂದ ಪರಮಾತ್ಮನೆ ಇಂತಹ ಮಹಾತ್ಮರ ಅನುಭಾವವನ್ನು ನನಗೆ ದೊರಕಿಸು. ಇದರಿಂದ ನಾನು ಬದುಕುತ್ತೇ ನಾನು ಎಂದರೆ ಆತ್ಮನು. ದೇಹಗತ ಗುಣಗಳು ಹೋಗಿ ಆತ್ಮಗತ ಭಾವ ಬಂದಾಗ ವ್ಯಕ್ತಿಯ ಉದ್ಧಾರ. ಎಲ್ಲ ಜೀವಾವಳಿಗಳು ತನುಗುಣದಲ್ಲಿ ಬದುಕುತ್ತವೆ. ಮನುಷ್ಯನೂ ಅಷ್ಟೆ ಒಂದಿಷ್ಟೂ ತನುಗುಣಗಳನ್ನು ಈತನು ದಾಟಲಾಗಿಲ್ಲ. ಈ ತನು ಗುಣಗಳನ್ನು ದಾಟುವ ಶಕ್ತಿ ಬರುವುದೆ ಅನುಭಾವದಿಂದ.

: 11) ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು.
ತನ್ನ ಋಣ ನಿಧಾನ ಎದ್ದು ಕರೆಯಿತ್ತು.
ಹೆಪ್ಪಿಟ್ಟ ಹಾಲು ಗಟ್ಟಿತುಪ್ಪವಾಗಿ ಸಿಹಿಯಾಯಿತ್ತು.
ಇದಕ್ಕೆ ತಪ್ಪ ಸಾಧಿಸಲೇಕೆ ? ಚೆನ್ನಮಲ್ಲಿಕಾರ್ಜುನ ದೇವರ ದೇವನ
ಅಣ್ಣಗಳಿರಾ.

### ವಚನದ ಅರ್ಥ

ಮರೆದು-ಆಯಾಸಗೊಂಡು,
ಒರಗಿ-ನಿದ್ರೆಗೆ ಹೋಗಿ,
ಸತ್ತಹೆಣ-ನಿದ್ರೆಗೆ ಹೋದ ಶರೀರ,

### ವಚನದ ಅರ್ಥ

ಮರೆದೊರಗಿ ಕನಸಕಂಡು ಹೇಳುವಲ್ಲಿ ಸತ್ತಹೆಣ ಎದ್ದಿತ್ತು.ದೇಹವು ದಣಿದು ನಿದ್ರೆಗೆ ಹೋಗುತ್ತದೆ.ಆ ನಿದ್ರೆಯಲ್ಲಿ ಕನಸು ಕಾಣುತ್ತದೆ. ಕನಸು ಮುಗಿದು ನಿದ್ರೆ ಕಳೆದು ದೇಹ ಏಳುತ್ತದೆ. ಎದ್ದಮೇಲೆ ತಾನು ಕಂಡ ಕನಸನ್ನು ಹೇಳುತ್ತದೆ. ಕನಸನ್ನು ವಿವರಿಸುವಾಗ ಎದ್ದಿರುವ ದೇಹ ಯಾವುದು? ಕನಸು ಕಾಣುವಾಗ ಸತ್ತಹಾಗೆ ಮಲಗಿದ್ದ ಶರೀರವೆ ಈಗ ಎದ್ದಿತ್ತು. ತನ್ನ ಋಣ ನಿಧಾನ ಎದ್ದು ಕರೆಯಿತ್ತು ಭೂಮಿಯಲ್ಲಿ ಹೂತಿಟ್ಟ ನಿಧಿ ಲಭ್ಯವಿದ್ದವರಿಗೆ ಸಿಗುತ್ತದೆ. ನಿಧಿ ಋಣವಿದ್ದವರನರನ್ನು ತೆಗೆದುಕೊಳ್ಳುವಂತೆ ಕರೆಯುತ್ತದೆ. ನಿಧಿ ಹೊರಗೆ ಬಂದಾಗ ಅದು ಕರೆದಂತೆಯೇ ಆಯಿತು. ಹೆಪ್ಪಿಟ್ಟ ಹಾಲು ಗಟ್ಟಿತುಪ್ಪವಾಗಿ

ಸಿಹಿಯಾಯಿತ್ತು. ಹಾಲಿಗೆ ಹೆಪ್ಪು ಹಾಕಿದಾಗ ಮರು ದಿನಕ್ಕೆ ಮೊಸರಾಗುವುದು ಅದೆ ಕಡೆದರೆ ಬೆಣ್ಣೆ ಕಾಯಿಸಿದರೆ ತುಪ್ಪ.ಮಾಧುಯ್ಯದ ಪರಿಮಳ. ಇದಕ್ಕೆ ತಪ್ಪ ಸಾಧಿಸಲೇಕೆ ?ಚೆನ್ನಮಲ್ಲಿಕಾರ್ಜುನ ದೇವರದೇವನ ಅಣ್ಣಗಳಿರಾ. ಇದರಲ್ಲಿ ತಪ್ಪೇನಿದೆ ?ಹಠ ಯಾಕೆ? ಪರಾಮತ್ಮನ ಅಣ್ಣಗಳಿರಾ ಒಂದು ಮಗುವಿಗೂ ತಿಳಿಯಬೇಕು ಹಾಗೆ ಅಷ್ಟು ಸರಳವಾಗಿ ಉತ್ತರ ನೀಡಿದ್ದಾರೆ. ಇಂತಹ ಪ್ರಶ್ನೆಗಳನ್ನೆಲ್ಲ ಹಾಕುವ ಅಗತ್ಯವೇನೂ ಇರಲಿಲ್ಲ ಅಕ್ಕನವರು ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ.ಅವರು ಸಮರ್ಥರಿದ್ದಾರೆ. ಅದರೆ ಒಬ್ಬ ಹೆಣ್ಣು ಮಗಳು ದೊಡ್ಡ ಸಾಧನೆ
ಮಾಡಿದಾಗ ಸಮಾಜ ಬಾಂಧವರು ಗೌರವಿಸಿ ಮನ್ನಣೆ ಮಾಡಬೇಕಾದುದು ಧರ್ಮ.ಶರಣರ ಅನುಭವ ಮಂಟಪ ಕೂಡ ಮಹಿಳೆಯನ್ನು ಅದರಲ್ಲೂ ಬಹು ದೊಡ್ಡ ತ್ಯಾಗಿ ಅಪೂರ್ವಪ್ರತಿಭಾವಂತಳನ್ನು ಬಹು ಅದ್ದೂರಿಯಿಂದ ಸ್ವಾಗತಿಸಿ ಗೌರವಿಸಿ ಮನ್ನಿಸಬೇಕು. ಶರಣರು ಕೂಡ ಒರೆ ಹಚ್ಚುತ್ತಾರೆ ಎಂದರೆ ಮಹಿಳೆಗೆ ಸ್ವಾತಂತ್ರ್ಯ ಗೌರವ ಎಲ್ಲಿದೆ?
ಇದನ್ನೆಲ್ಲವನ್ನು ಅನುಭವ ಮಂಟಪದಲ್ಲಿ ಕಂಡ ಅಕ್ಕಮಹಾದೇವಿಯವರಿಗೆ, ಸಾಕು ಸಾಕು ಇಂಥ ಶರಣರ
ಸಹವಾಸ , ಒಂದು ಎರಡು ದಿನಗಳ ಕಾಲ ಇದ್ದು.
ಅಲ್ಲಮಪ್ರಭುವಿನ ಆರರ್ಶಿವಾದ ಪಡೆದು.
ಶ್ರೀ ಶೈಲದ ಕಡೆಗೆ ಹೋದರು.

12) ಮುತ್ತು ನೀರಲಾಯಿತ್ತು. ವಾರಿಕಲ್ಲು ನೀರಲಾಯಿತ್ತು. ಉಪ್ಪು ನೀರಲಾಯಿತ್ತು ಉಪ್ಪು ಕರಗಿತ್ತು. ವಾರಿಕಲ್ಲು ಕರಗಿತ್ತು.
ಮುತ್ತು ಕರಗಿದುದ ನಾರೂ ಬಲ್ಲವರಿಲ್ಲ. ಈ ಸಂಸಾರಿ ಮಾನವರು
ಲಿಂಗಮುಟ್ಟಿ ಭವಬಾರಿಗೊಳಗಾದರು.
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯ ಚೆನ್ನಮಲ್ಲಿಕಾರ್ಜುನಾ.

### ಪದಗಳ ಅರ್ಥ

ಮುತ್ತು-ನವರತ್ನಗಳಲ್ಲಿ ಒಂದು.
ವಾರಿಕಲ್ಲು-ಮಂಜುಗೆಡ್ಡೆ
ಬಾರಿ-ಜನ್ಮದಲ್ಲಿಬರು.
ಕರಿ ಗೊಳ್-ಕರ್ಪೂರದಂತೆ ಉರಿದುಹೋಗುವುದು.

### ವಚನದ ಅರ್ಥ

ಮುತ್ತು ನೀರಲಾಯಿತ್ತು ವಾರಿಕಲ್ಲು ನೀರಲಾಯಿತ್ತು. ಉಪ್ಪು ನೀರಲಾ ಯಿತ್ತು. ನವರತ್ನಗಳಲ್ಲಿ ಒಂದಾದ ಮುತ್ತು ನೀರಿನಿಂದಲೆ ಆಯಿತ್ತು. ಸಾಂಪ್ರದಾಯಿಕ ನಂಬಿಕೆಯ ಪ್ರಕಾರ ಸ್ವಾತಿಮಳೆಹನಿ,ಕಪ್ಪೆ ಚಿಪ್ಪಿನಲ್ಲಿ ಗೊತ್ತಾದ ಕ್ಷಣದಲ್ಲಿ ಬಿದ್ದಾಗ ಅಲ್ಲಿ ಮುತ್ತು ಉಂಟಾಗುವುದೆಂದು ಪ್ರತೀತಿ.ಶೀತ ಹೆಚ್ಚಿದಾಗ ನೀರೆ

ಹಿಮ, ಹಿಮ ಗೆಡ್ಡೆ,ವಾರಿಕಲ್ಲು ಮಂಜುಗೆಡ್ಡೆ ಯಾಗುವುದು.ಉಪ್ಪು ಸಮುದ್ರದ ನೀರಿನಿಂದ ಮಾಡುವುದು ಎಲ್ಲರಿಗೂ ಗೊತ್ತೇ ಇದೆ. ಮುತ್ತು ಮಂಜುಗೆಡ್ಡೆ,ಉಪ್ಪು ಇವು ಮೂರೂ ನೀರಿನಿಂದಲೆ ನಿರ್ಮಾಣಗೊಳ್ಳುತ್ತವೆ. ಉಪ್ಪು ಕರಗಿತ್ತು. ವಾರಿಕಲ್ಲು ಕರಗಿತ್ತು. ಮುತ್ತು ಕರಗಿದುದನಾರು ಬಲ್ಲವರಿಲ್ಲ. ನೀರಿನಿಂದ ಈ ಮೂರು ವಸ್ತುಗಳು ನಿರ್ಮಾಣವಾದರೂ ಉಪ್ಪು ಅದೆ ನೀರಿನಲ್ಲಿ ಕರಗಿ ಬಿಡುತ್ತದೆ. ಹಿಮ, ಮಂಜುಗೆಡ್ಡೆ ಕೂಡ ಉಷ್ಣತೆಯಿಂದ ನೀರಿನಲ್ಲಿ ಕರಗುತ್ತದೆ. ಆದರೆ ಮುತ್ತು ಮಾತ್ರ ಏನು ಮಾಡಿದರೂ ಎಷ್ಟು ಕಾಯಿಸಿದರೂ ಕರಗುವುದಿಲ್ಲ. ಅದು ಮುತ್ತಾಗಿಯೆ ಉಳಿ ಯುತ್ತದೆ. ಅದು ಮತ್ತೆ ಹಿಂದಿನ ವಸ್ತುಗಳೊಂದಿಗೆ ಕರಗುವುದಿಲ್ಲ. ಮುತ್ತುಕರಗಿದು ದನಾರು ಬಲ್ಲವರಿಲ್ಲ. ಈ ಸಂಸಾರಿ ಮಾನವರು ಲಿಂಗಮುಟ್ಟಿ ಭವಬಾರಿಗೊಳಗಾದರು ನಾನಿಮ್ಮ ಮುಟ್ಟಿ ಕರಿಗೊಂಡೆನಯ್ಯ ಮುತ್ತು ಕರಗಿದುದನು ಯಾರೂ ನೋಡ ಲಿಲ್ಲ. ಈ ಮನುಷ್ಯರು ಲಿಂಗವನ್ನು ಪಡೆದುಕೊಂಡೂ ಜನನ ಮರಣಕ್ಕೆ ಒಳಗಾದರು.ಪರಮತ್ಮನೆ ನಾ ನಿಮ್ಮ ಮುಟ್ಟಿದೆ,ಪೂಜಿಸಿದೆ ನಿಮ್ಮತ್ತ ಬರುತ್ತಿದ್ದೇನೆ. ಚೆನ್ನಮ ಲ್ಲಿಕಾರ್ಜುನಯ್ಯನೆ ನನ್ನನ್ನು ನಿನ್ನತ್ತ ಕರೆದುಕೊಳ್ಳಯ್ಯ. ಉಪ್ಪು ಮಂಜುಗೆಡ್ಡೆ, ಮುತ್ತು ಈ ಮೂರು ದೃಷ್ಟಾಂತಗಳನ್ನು ನಾವು ಇಲ್ಲಿ ವಿಶೇಷವಾಗಿ ಲಕ್ಷಿಸಬೇಕು. ಉಪ್ಪು, ಹಿಮ ಮತ್ತೆ ಮತ್ತೆ ಕರಗುತ್ತವೆ ರೂಪುಗೊಳ್ಳು ಇವೆ. ಅವುಗಳು ಒಂದರ್ಥದಲ್ಲಿ ಜನನಮರಣಕ್ಕೊಳಗಾದ ವಸ್ತುಗಳು. ಮುತ್ತು ಹಾಗಲ್ಲ. ಅದಕ್ಕೆ ಮತ್ತೆ ಹಿಂದಿನ ವಸ್ತುಗಳೊಂದಿಗೆ ಮಿಲನವಿಲ್ಲ. ಅದು ಬಿಡುಗಡೆ ಗೊಂಡಿತು . ಹಾಗೆ ಅಕ್ಕಮಹಾದೇವಿಯವರು ಮುತ್ತಾಗಬಯಸಿದ್ದಾರೆ. ಅವರಿಗೆ ಉಪ್ಪು ಹಿಮದ ಗುಣಸ್ವಭಾವಗಳು ಬೇಡ. ಈ ಭವ ಅವರಿಗೆ ಸಾಕು ಎನ್ನಿಸಿದೆ.

**13) ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ. ಬೇಡಿದರೆ ಇಕ್ಕದಂತೆ ಮಾಡಯ್ಯ. ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯ. ನೆಲಕ್ಕೆ ಬಿದ್ದಡೆ, ನಾನೆತ್ತಿ ಕೊಂಬುದಕ್ಕೆ ಮುನ್ನವೆ ಶುನಿ ಎತ್ತಿಕೊಂಬಂತೆ ಮಾಡಯ್ಯ. ಚೆನ್ನಮಲ್ಲಿಕಾರ್ಜುನಾ.**

**ವಚನದ ಅರ್ಥ**

ಈವಚನ ಉಡುತಡಿಯಿಂದ ನಿರ್ಗಮಿಸಿ ಕೆಲಕಾಲ ತಪಸ್ಸು ನಡೆಸುವಾಗ ಹಾಡಿಕೊಂಡದ್ದು. ಹಸಿವೆಯನ್ನು ಗೆಲ್ಲುವ ಹಠ. ದೇಹದ ಮೇಲೆ ಹತೋಟಿ ಸಾಧಿಸುವ ಉತ್ಸಾಹ. ತಾರುಣ್ಯದ ಹೋರಾಟದ ಮನೋಭಾವ ಇವೆಲ್ಲ ಅಕ್ಕನವರಲ್ಲಿ ಮೇಳವಿಸಿ ಒಂದು ಹೊಸ ಸ್ಫೂರ್ತಿಯನ್ನೂ ಆ ಮೂಲಕ ಸಾಧಿಸುವ ಗುರಿಯನ್ನೂ ಖಚಿತ ಮಾಡಿಕೊಂಡು ಜೀವನಸಮುದ್ರಕ್ಕೆ ದುಮುಕಿದ ಮಹಾದೇವಿಯವರು ಎಲ್ಲ ಆತಂಕಗಳನ್ನು ಎದುರಿಸಲು ಸಿದ್ದರಾಗಿ ಹಾಡಿಕೊಂಡ ವಚನವಿದು. ಮನೆ ಮನೆ ತಪ್ಪದೆ ಬೇಡುವಂತೆ ಮಾಡಯ್ಯ, ಬೇಡಿದರೆ ಇಕ್ಕದಂತೆ ಮಾಡಯ್ಯ. ಚೆನ್ನಮಲ್ಲಿಕಾರ್ಜುನನೆ ನಿನ್ನಲ್ಲಿ ಒಂದು ಬೇಡುತ್ತೇನೆ. ನನ್ನನ್ನು ಮನೆ ಮನೆ ತಪ್ಪದೆ ಬಿಡದೆ ಬೇಡುವಂತೆ ಮಾಡು. ನನ್ನಲ್ಲಿ ಏನೂ ಇಲ್ಲದಂತೆ ಮಾಡು. ಹಸಿವಿಗಾಗಿ ಬೇಡಿದಾಗ, ಈ ದೇಹದ ಅಭಿಮಾನ ನಷ್ಟ ವಾಗುತ್ತದೆ. ಹಾಗೆ ಮಾಡು. ಈ ಅಭಿಮಾನ ಇರುವವರೆಗೆ

ನೀನು ದೂರನಾಗಿ ರುವೆ. ಬೇಡಿದೊಡೆ ಇಕ್ಕದಂತೆ ಮಾಡಯ್ಯ. ಇಕ್ಕಿದಡೆ ನೆಲಕ್ಕೆ ಬೀಳುವಂತೆ ಮಾಡಯ್ಯ. ನಾನು ಬೇಡಿದಾಗ ಕರುಣಾಮಯಿಗಳು, ನೀಡದಂತೆ ಮಾಡು. ಇಕ್ಕಿದಡೆ ನೆಲಕ್ಕೆ ಬೀಳುವಂತೆ ಮಾಡಯ್ಯ. ದಯಾಳು ನೀಡಿದರು ಆಗ ನೆಲಕ್ಕೆ ಬೀಳುವಂತೆ ಮಾಡು. ನೆಲಕ್ಕೆ ಬಿದ್ದಡೆ ನಾನೆತ್ತಿ ಕೊಂಬುದಕ್ಕೆ ಮುನ್ನವೆ ಶುನಿ ಎತ್ತಿ ಕೊಂಬಂತೆ ಮಾಡಯ್ಯ. ನೀಡಿದ್ದು ನೆಲಕ್ಕೆ ಬಿತ್ತು ನಾನು ಎತ್ತಿ ಕೊಳ್ಳಲು ಹೋದಾಗ ನಾನು ಎತ್ತಿಕೊಳ್ಳುವ ಮುಂಚೆಯೆ ಅದನ್ನು ನಾಯಿ ಎತ್ತಿ ಕೊಳ್ಳುವಂತೆ ಮಾಡಾ ಚೆನ್ನಮಲ್ಲಿಕಾರ್ಜುನಾ. ಯಾಕೆ ಹೀಗೆ ಪ್ರಾರ್ಥಿಸಿದ್ದಾರೆ ಎಂದು ನಮಗೆ ಆಶ್ಚರ್ಯವಾಗಬಹುದು. ಸಾಧನಾಮಾರ್ಗದಲ್ಲಿ ಸಾಗುವ ಸಾಧಕನಿಗೆ ಬಹಳಷ್ಟು ಅಭಿಮಾನ ಅಹಂಕಾರಗಳು ಇರುತ್ತವೆ. ಇವು ಪರಿಪೂರ್ಣರಾಗುವ ದಾರಿ ಯಲ್ಲಿ ಆತಂಕಗಳು. ಅನುಭಾವಿಯಾಗುವವರು ಈ ದೇಹದ ಎಲ್ಲ ಮಾನಾಭಿ ಮಾನಗಳನ್ನು ಗೆಲ್ಲಬೇಕು. ಆದುದರಿಂದ ಅಕ್ಕನವರು ಹೀಗೆ ಬೇಡಿದ್ದಾರೆ.

**14)ಮೂಲ ಧ್ವಾರದ ಬೇರಮೆಟ್ಟಿ ಭೂಮಂಡಲವನೇರಿದೆ. ಆಚಾರದ ಬೇರ ಹಿಡಿದು ಐಕ್ಯದ ತುದಿಯನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ ಕೈವಿಡಿದು ತೆಗೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ.**

**ಪದಗಳ ಅರ್ಥ**

ಮೂಲದ್ವಾರ-ಕುಂಡಲಿನಿ ಶಕ್ತಿ.
ಮೂಲದ್ವಾರದ ಬೇರು-ಬೆನ್ನುಹುರಿ.ಸುಷುಮ್ನ ನಾಡಿ
ಭೂಮಂಡಲ-ಆಕಾಶ. ಆಜ್ಞಾಚಕ್ರ.
ಆಚಾರ-ಧ್ಯಾನ. ಲಿಂಗಧ್ಯಾನ,
ಐಕ್ಯದತುದಿ-ಸಹಸ್ರಾರ.
ವೈರಾಗ್ಯ-ಜ್ಞಾನ
ಸೋಪಾನ-ಮೆಟ್ಟಿಲು.
ಶ್ರೀಗಿರಿ-ಶಿಖಾಚಕ್ರ.

**ವಚನದ ಅರ್ಥ**

ಮೂಲದ್ವಾರದ ಬೇರ ಮೆಟ್ಟಿ ಭೂಮಂಡಲವನೇರಿದೆ. ಆಧಾರಚಕ್ರದಲ್ಲಿ ಕುಲ ಕುಂಡಲಿನಿಯನ್ನು ಒತ್ತಿಮೆಟ್ಟಿ ಸುಷುಮ್ನಾನಾಡಿಯ ಮೂಲಕ ಆಜ್ಞಾಚಕ್ರಕ್ಕೆ ಬಂದು ನಿಂದೆ. ಆಚಾರದ ಬೇರಹಿಡಿದು ಐಕ್ಯದ ತುದಿಯನೇರಿದೆ. ಸದಾಚಾರದ ಬೇರನ್ನು ಗಟ್ಟಿಹಿಡಿದೆ. ಈ ಬೇರು ಜೀವಶಕ್ತಿ ಹರಿಸಲು ಆಧಾರ. ಇಲ್ಲಿಂದ ಶಿಖಾಚ ಕ್ರಕ್ಕೆ ಬಂದು ನಿಂದೆ. ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ. ವೈರಾಗ್ಯದ ಮೆಟ್ಟಲಿನ ಮೂಲಕ ಸಹಸ್ರಾರಕ್ಕೆ ಬಂದು ಮುಟ್ಟಿದೆ. ಕೈವಿಡಿದು ತೆಗೆದುಕೊಳ್ಳಾ ಚೆನ್ನ ಮಲ್ಲಿಕಾರ್ಜುನಾ. ಚೆನ್ನಮಲ್ಲಿಕಾರ್ಜುನನೆ ನನ್ನನ್ನು ಸ್ವಾಗತಿಸಿ ನಿನ್ನ ಮಡಿಲಿಗೆ ಕರೆದುಕೊ.ಬಾ. ಅಕ್ಕಮಹಾದೇವಿಯವರಿಗೆ

ಚೆನ್ನಮಲ್ಲಿಕಾರ್ಜುನನಲ್ಲಿ ಕೊನೆಯಲ್ಲಿ ಕೂಡ ನನ್ನ ನಲ್ಲ. ನಾನು ನಿನ್ನ ನಲ್ಲೆ.
ನಿನ್ನಲ್ಲಿ ಸಮರಸಸುಖ ಹೊಂದುವೆ ಎನ್ನುತ್ತಾ ರೆ. ಧ್ಯಾನಸ್ಥಸಮಾಧಿಗೆ
ಅಕ್ಕಮಹಾದೇವಿಯವರು ಬಹಳ ಹಂಬಲಿಸಿದರು.ಅಕ್ಕನವರ ದಿವ್ಯ ಚೇತನ,
ಆತ್ಮ ದಹೊಳೆ ಚೆನ್ನಮಲ್ಲಿಕಾರ್ಜುನ ಎನ್ನುವ ಕಡಲಲ್ಲಿ ಸಮರಸ
ಹೊಂದುವವರೆಗೂ ಸಮಾ ಧಾನವಿಲ್ಲ. ಆ ಹಂಬಲದಲ್ಲಿಯೆ ಅವರು ಗುರಿ
ಸೇರಿದರು.
ಶ್ರೀ ಶೈಲದ ಗುಹೆಯ ಕದಳಿವನದಲ್ಲಿ